ನನ್ನ ಗಂಡ ಸುಮ್ಮನಿರೋದು ಬಿಟ್ಟು, ಹಬ್ಬ ಬಂತಲ್ಲ, ಗಣಪತಿಯೇ ಬಂದಿದ್ದಾನೆ ಅಂತ ದೇವರ ಕೋಣೆಗೆ ಹೋಗಿ ತಟ್ಟೆಯಲ್ಲಿ ಕರ್ಪೂರ ಹಚ್ಚಿಕೊಂಡು ಬಂದು ಅದರ ಎದುರು ಸ್ವಲ್ಪ ಹತ್ತಿರಕ್ಕೇ ಹೋಗಿ ನಿಂತು ಮಂಗಳಾರತಿ ಎತ್ತೋಕೆ ಶುರುಮಾಡಿದರು. ಆಗ ಅದು ಬೆದರಿ ಇವರ ಕಡೆಗೆ ನುಗ್ಗಿ ಸೊಂಡಿಲಿಂದ ಎಳೆದುಕೊಂಡು ಕಾಲಿಂದ ತುಳಿದು ಹಾಕಿತು. ಅವರು ಕೂಗಿಕೊಂಡದ್ದಷ್ಟೇ ನಂಗೆ ಕೇಳಿಸ್ತು. ಕೆಲವೇ ಕ್ಷಣಗಳಲ್ಲಿ ಎಲ್ಲ ಮುಗೀತು. ತಲೆ ಜಜ್ಜಿ ಹೋಗಿತ್ತು. ಅರ್ಧ ಗಂಟೆ ನಂತರ ಆನೆ ಅಂಗಳದಿಂದ ಹೋಯ್ತು.

ನಂಗೆ ಪ್ರಜ್ಞೆ ಬಂದಾಗ ಅವರನ್ನು ಅಂಗಳದಲ್ಲಿ ಮಲಗಿಸಿದ್ದರು. ಅವರ ಮೇಲೆ ಬಟ್ಟೆ ಹೊದಿಸಿದ್ದರು. ಬಟ್ಟೆ ಸರಿಸಿ ನೋಡಬೇಡ, ಆನೆ ಕಾಲಿಗೆ ಸಿಕ್ಕಿ ಅವರ ಮುಖವೇ ಇಲ್ಲವಾಗಿದೆ. ಮುಖವೇ ಇಲ್ಲದ ಅವರನ್ನು ನೋಡಿದರೆ ಅದೇ ಕೊನೇತನಕ ನಿನ್ನ ಮನಸ್ಸಲ್ಲಿ ಉಳಿದುಬಿಡುತ್ತೆ ಅಂತ ಯಾರೋ ಅಂದರು. ನಾನು ಗಂಡನ ಮುಖ ನೋಡಲಿಲ್ಲ...

ಗಂಡ, ಮಗನ ಜತೆ ಸುಖವಾಗಿದ್ದ ನಾನು ಈಗ ಒಂಟಿಯಾಗಿ ಬಿಟ್ಟೆ. ಅಜಯನಿಗೆ ಅವರಪ್ಪ ಸತ್ತಿರೋ ಸುದ್ದಿ ಗೊತ್ತಿಲ್ಲ.

ನನ್ನ ಗಂಡನ ತಂಗಿ ಮಗ ಬಂದು ಅಂತ್ಯ ಸಂಸ್ಕಾರ ಮಾಡಿದ. ತೋಟದ ಮನೆಯಲ್ಲಿ ಈಗ ಒಬ್ಬಳೇ ಇದ್ದೀನಿ. ಈಗ ಹೊಸದೊಂದು ಸಮಸ್ಯೆ ಶುರುವಾಗಿದೆ. ಗಂಡನ ತಂಗಿ ಮತ್ತವಳ ಗಂಡ ತೋಟದಲ್ಲಿ

